# ಕಲರ್‌ಫುಲ್ ಟೆಸ್ಟ್!




**ಜಗತ್ತೇ ಬದಲಾಗುತ್ತಿರುವಾಗ ಟೆಸ್ಟ್ ಕ್ರಿಕೆಟ್ ಬದಲಾಗದಿದ್ದರೆ ಹೇಗೆ? ಹೊನಲು ಬೆಳಕಿನ ಟೆಸ್ಟ್ ಆಯೋಜನೆಯ ಪರಿಕಲ್ಪನೆ ಹಿಂದೆ ಪ್ರೇಕ್ಷಕರನ್ನು ಸೆಳೆಯುವುದು ಮಾತ್ರವಲ್ಲ; ಟೆಲಿವಿಷನ್ ಪ್ರಸಾರಕರು, ಜಾಹೀರಾತುದಾರರನ್ನು ಸೆಳೆಯುವ ಅಭಿಲಾಷೆಯೂ ಇದೆ. ಬದಲಾವಣೆ ನೆಪದಲ್ಲಿ ಆಟದ ಸ್ವರೂಪಕ್ಕೆ ಧಕ್ಕೆಯಾಗಬಾರದು ಅಷ್ಟೆ.**

■ **ಕೆ. ಓಂಕಾರ ಮೂರ್ತಿ**

**ನೂ**ರಾರು ವರ್ಷಗಳ ಇತಿಹಾಸದ ಕ್ರಿಕೆಟ್ ಜಗತ್ತಿನಲ್ಲಿ ಟೆಸ್ಟ್ ಮಾದರಿ ತುಂಬ ಕಾಲದಿಂದ ಬದಲಾವಣೆ ಕಾಣದೇ ಸೊರಗಿದ್ದು ನಿಜ. ಏಕದಿನ, ಟ್ವೆಂಟಿ–20 ಸ್ವರೂಪದಲ್ಲಿ ಕ್ರಿಕೆಟ್ ಪಡಕೊಳ್ಳುತ್ತಿರುವ ಆಕರ್ಷಣೆಗೆ ಹೋಲಿಸಿದರೆ ಇದು ಸ್ಪಷ್ಟವಾಗುತ್ತದೆ. ಟೆಸ್ಟ್‌ಗೂ ಹೊಸತನ ತುಂಬುವ ಮತ್ತದರ ಮೆರಗನ್ನು ಹೆಚ್ಚಿಸುವ ಯತ್ನಗಳು ಭರ್ಜರಿಯಾಗಿ ನಡೆಯುತ್ತಿವೆ.

ದೊಡ್ಡ ಉದ್ಯಮವಾಗಿ ಬೆಳೆದ ಕ್ರಿಕೆಟ್, ತನ್ನ ಬಹುಕಾಲದ ಟೆಸ್ಟ್ ಮಾದರಿಗೂ ಹೊಸತನವನ್ನು ತುಂಬಿಕೊಳ್ಳಬೇಕಾದ ಅನಿವಾರ್ಯತೆಯಲ್ಲಿದ್ದಂತೆ ತೋರುತ್ತಿದೆ. ತನ್ನದೇ ಕಲಾವಂತಿಕೆ ಮತ್ತು ಕ್ರೀಡಾಸ್ಫೂರ್ತಿಯ ಸೆಲೆಯಂತಿರುವ ಟೆಸ್ಟ್ ಕ್ರಿಕೆಟ್ ಸೊಗಸುಗಾರಿಕೆಯೇ ಭಿನ್ನ. ಅದರಿಂದಲೇ ಅದು ಕ್ರಿಕೆಟಿಗರನ್ನು ಮತ್ತು ಅಭಿಮಾನಿಗಳನ್ನು ಸೆಳೆದಿತ್ತು. ಒಂದೊಮ್ಮೆ ಟೆಸ್ಟ್ ಆಡುವುದು ಆಟಗಾರರ ಬಹುದೊಡ್ಡ ಕನಸಾಗಿತ್ತು. ಟೆಸ್ಟ್ ತಾರೆ ಡಾನ್ ಬ್ರಾಡ್ಮನ್, ಗ್ಯಾರಿ ಸೋಬರ್ಸ್, ಸುನಿಲ್ ಗಾವಸ್ಕರ್, ಕಪಿಲ್, ಜಿ.ಆರ್.ವಿಶ್ವನಾಥ್, ಸಚಿನ್ ತೆಂಡೂಲ್ಕರ್, ದ್ರಾವಿಡ್.. ಅವರಂಥ ದಿಗ್ಗಜರೆಲ್ಲ ನೆನಪಾಗುವುದು ಟೆಸ್ಟ್ ಪಂದ್ಯಗಳಲ್ಲಿ ಅವರ ಆಟಗಾರಿಕೆ, ತೋರಿದ ಕ್ರೀಡಾಮನೋಭಾವ, ನೈಪುಣ್ಯ, ಸಂಯಮ ಮತ್ತು ರೂಪಿಸಿದ ದಾಖಲೆಗಳು ಕಾರಣ.

‘ಟೆಸ್ಟ್ ಕ್ರಿಕೆಟ್ ಸ್ಕಾಚ್ ಇದ್ದಂತೆ, ಏಕದಿನ ಕ್ರಿಕೆಟ್ ವಿಸ್ಕಿ ರೀತಿ, ಟ್ವೆಂಟಿ–20 ಕಂಟ್ರಿ ಲಿಕ್ಕರ್ ಇದ್ದಂತೆ’ ಎಂದು ದ್ರಾವಿಡ್ ಒಮ್ಮೆ ಹೇಳಿದ ಮಾತು ನೆನಪಾಗುತ್ತದೆ.

‘ವಿನೂತನ ಪ್ರಯೋಗಗಳಿಗೆ ಒಡ್ಡಿಕೊಳ್ಳದಿದ್ದರೆ ಟೆಸ್ಟ್ ಕ್ರಿಕೆಟ್‌ಗೆ ಖಂಡಿತ ಭವಿಷ್ಯ ಇರುವುದಿಲ್ಲ. ಕ್ರಿಕೆಟ್ ಆಟವನ್ನು ತುಂಬಾ ಪ್ರೀತಿಸುವ ಏಷ್ಯಾ ಖಂಡದಲ್ಲಿಯೇ ಟೆಸ್ಟ್ ವೀಕ್ಷಿಸಲು ಜನ ಕ್ರೀಡಾಂಗಣಕ್ಕೆ ಬರುತ್ತಿಲ್ಲ. ಶಾಲಾ ಮಕ್ಕಳಿಗೆ ಉಚಿತವಾಗಿ ಟೆಸ್ಟ್ ವೀಕ್ಷಿಸಲು ಅವಕಾಶ ಮಾಡಿಕೊಡಿ. ಆಟದಲ್ಲಿ ಕೆಲ ಬದಲಾವಣೆ ಮೂಲಕ ಪ್ರೇಕ್ಷಕರನ್ನು ಸೆಳೆಯಬೇಕು’ ಎಂದು ಟೆಸ್ಟ್